ಅನುಬಂಧ (1)

ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ರೈತ ಕಾಯಕ ಕೆರೆ ಯೋಜನೆಯಲ್ಲಿ ಹೋಬಳಿಗೊಂದು ಕೆರೆಯಂತೆ ಈ ಕೆಳಕಂಡ 6 ಕೆರೆಗಳನ್ನು ಅಭಿವೃದ್ಧಿಪಡಿಸಲು ಗುರುತಿಸಲಾಗಿದೆ.

ಕ್ರಮ ಸಂಖ್ಯೆ	ಹೋಬಳಿ	ಕೆರೆಯ ಹೆಸರು	ಅಂದಾಜು ಮೊತ್ತ
1.	ಕಸಬಾ	ಸಾರಂಗಿ ಕೆರೆ ಅಭಿವೃದ್ಧಿ	6.15 ಲಕ್ಷ
2.	ಕಿಕ್ಕೇರಿ	ಮಾರ್ಗಗೋವನಹಳ್ಳಿ ಕೆರೆ ಅಭಿವೃದ್ಧಿ	6.75 ಲಕ್ಷ
3.	ಸಂತೇಬಾಚನಹಳ್ಳಿ	ಅಗಲ್ಯಾ ಕೆರೆ ಅಭಿವೃದ್ಧಿ	39.00 ಲಕ್ಷ
4.	ಬೂಕನಕೆರೆ	ಊರ ಮುಂದಿನ ಕೆರೆ ಅಭಿವೃದ್ಧಿ	6.30 ಲಕ್ಷ
5.	ಶೀಲನೆರೆ	ಅಮ್ಮನಕೆರೆ ಅಭಿವೃದ್ಧಿ	5.40 ಲಕ್ಷ
6.	ಅಕ್ಕಿಹೆಬ್ಬಾಳು	ಅಲ್ಲಾಡಿಸಮುದ್ರ ಕೆರೆ ಅಭಿವೃದ್ಧಿ	4.50 ಲಕ್ಷ

ಶಿವಮೊಗ್ಗ ಕ್ಷೇತ್ರದಲ್ಲಿ ಅಬಕಾರಿ ಬಾಬ್ತಿನಿಂದ ಬಂದ ಆದಾಯ

1010 (454) - ಶ್ರೀ ಚಂದ್ರಶೇಖರಪ್ಪ ಹೆಚ್ ಎಂ. (ಶಿವಮೊಗ್ಗ) ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಅಬಕಾರಿ ಇಲಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ ಬಂದ ಆದಾಯ ಎಷ್ಟು?

ಆ) ತೆರಿಗೆ ರಹಿತ ಮದ್ಯ ಮಾರಾಟ ಕಡೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ತನಕ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ?

ಇ) ಶಿವಮೊಗ್ಗ ನಗರದಲ್ಲಿ ಅನಧಿಕೃತವಾಗಿ ಮದ್ಯ ತಯಾರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಈ) ಶಿವಮೊಗ್ಗ ನಗರಸಭಾ ವ್ಯಾಪ್ತಿಯಲ್ಲಿ 2001-02ರಲ್ಲಿ ಎಷ್ಟು ಮದ್ಯದ ಅಂಗಡಿಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ಸಚಿವರು) :

ಅ) ವಿವರಗಳು ಕೆಳಕಂಡಂತಿವೆ:

ಕೋಟಿ ರೂ.ಗಳಲ್ಲಿ

ವರ್ಷ	ಅಬಕಾರಿ ಆದಾಯ
1999-2000	35.84
2000-2001	45.85
2001-2002	47.90

ಆ) ತೆರಿಗೆ ರಹಿತ ಮದ್ಯ ಹಾವಳಿ ತಡೆಗಟ್ಟಲು ಸರ್ಕಾರ ಚೆಕ್‌ಪೋಸ್ಟ್‌ಗಳನ್ನು ಹುಬ್ಬಳ್ಳಿನಗರದ ಆಸುಪಾಸಿನಲ್ಲಿ ನಿರ್ಮಿಸಿದೆ. ಇದಲ್ಲದೆ ರಸ್ತೆ ಗಸ್ತು, ಜಾರಿ ಮತ್ತು ತನಿಖೆಯನ್ನು ಚುರುಕುಗೊಳಿಸಿ ಶಿವಮೊಗ್ಗ ಜಿಲ್ಲೆಯಲ್ಲಿ 2001-02ನೇ ಸಾಲಿಗೆ 150 ಮೊಕದ್ದಮೆಗಳನ್ನು ದಾಖಲಿಸಿ 27 ವಾಹನಗಳನ್ನು ಹಾಗೂ 57878 ಲೀಟರ್ ಅಕ್ರಮ ಮದ್ಯವನ್ನು ವಶಪಡಿಸಿಕೊಂಡು 280 ಆರೋಪಿಗಳನ್ನು ಬಂದಿಸಲಾಗಿದೆ.

ಇದಲ್ಲದೆ ಸರ್ಕಾರ ತೆರಿಗೆ ರಹಿತ ಮದ್ಯ ಹಾವಳಿಯನ್ನು ತಡೆಗಟ್ಟಲು ಪ್ರತಿ ಮಧ್ಯದಂಗಡಿಗಳಲ್ಲಿ ನಗಧಿತ ಕನಿಷ್ಠ ಪ್ರಮಾಣದಲ್ಲಿ ಮಧ್ಯ ಎತ್ತುವಳಿ ಮಾಡಲು ಅಬಕಾರಿ ನಿಯಮಗಳಿಗೆ ತಿದ್ದುಪಡಿ ತರಲಾಗುತ್ತಿದೆ.

ಇ) ಹೌದು.

ಶಿವಮೊಗ್ಗ ನಗರದಲ್ಲಿ ಅನಧಿಕೃತ ಮಧ್ಯ ತಯಾರಿಸುವವರ ವಿರುದ್ಧ 2001-02ನೇ ಸಾಲಿನಲ್ಲಿ 2 ಮೊಕದ್ದಮೆಗಳನ್ನು ದಾಖಲಿಸಿ 17 ಲೀಟರ್ ಮಧ್ಯಸಾರ ಮತ್ತು 60.480 ಲೀಟರ್ ಮಧ್ಯ ವಶಪಡಿಸಿಕೊಂಡು 4 ಆರೋಪಿಗಳನ್ನು ಬಂಧಿಸಲಾಗಿದೆ.

ಈ) ಹೊಸದಾಗಿ ಯಾವ ಮದ್ಯದಂಗಡಿ ಪ್ರಾರಂಭಿಸಲು ಅನುಮತಿ ನೀಡಿರುವುದಿಲ್ಲ. ಹಾಲಿ ಸಾಲಿನಲ್ಲಿ ಶಿವಮೊಗ್ಗ ನಗರ ಸಭಾ ವ್ಯಾಪ್ತಿಯಲ್ಲಿ ಇರುವ ಮದ್ಯದಂಗಡಿಗಳ ವಿವರ ಈ ಕೆಳಕಂಡಂತಿವೆ.

1. ಸಿ.ಎಲ್ 2 (ಚಿಲ್ಲರೆ) - 44
2. ಸಿ.ಎಲ್-9 (ಬಾರ್) - 20

ಶಿವಮೊಗ್ಗ ನಗರದಲ್ಲಿನ ಕೊಳಚೆ ಪ್ರದೇಶಗಳು

1011 (455) - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ (ಶಿವಮೊಗ್ಗ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು : ಎಷ್ಟು ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸುವುದು ಬಾಕಿ ಇರುತ್ತದೆ.

ಆ) ಶಿವಮೊಗ್ಗ ನಗರದಲ್ಲಿನ ಎಷ್ಟು ಕೊಳಚೆ ಪ್ರದೇಶಗಳಲ್ಲಿನ ಜನರಿಗೆ ಪರಿಚಯ ಪತ್ರಗಳನ್ನು ನೀಡಲಾಗಿದೆ ಇನ್ನೂ ಎಷ್ಟು ಜನರಿಗೆ ಪರಿಚಯ ಪತ್ರಗಳನ್ನು ನೀಡುವುದು ಬಾಕಿ ಇರುತ್ತದೆ.

ಇ) ನಿರ್ಮಲ ಜ್ಯೋತಿ ಯೋಜನೆಯಡಿಯಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕಳೆದ 2 ವರ್ಷಗಳಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮಂಜೂರು ಮಾಡಿದ ಹಣ ಎಷ್ಟು:

ಈ) ವಾಂಬೆ ಯೋಜನೆಯಡಿಯಲ್ಲಿ ಶಿವಮೊಗ್ಗ ನಗರ ಪ್ರದೇಶದ ಕೊಳಚೆ ಪ್ರದೇಶಗಳಲ್ಲಿ ಮನೆ ನಿರ್ಮಾಣ ಮಾಡಲು ಆಯ್ಕೆ ಮಾಡಿದ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಶಿವಮೊಗ್ಗ ನಗರದಲ್ಲಿ 38 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, ಇದರಲ್ಲಿ 32 ಕೊಳಚೆ ಪ್ರದೇಶಗಳನ್ನು ಅಧಿನಿಯಮ 3 ರಂತೆ ಅಂತಿಮವಾಗಿ ಘೋಷಿತವಾಗಿದೆ ಇನ್ನುಳಿದ ಕೊಳಚೆ ಪ್ರದೇಶಗಳನ್ನು ಅಂತಿಮವಾಗಿ ಘೋಷಿತವಾಗಬೇಕಾಗಿರುತ್ತದೆ.

ಆ) ಶಿವಮೊಗ್ಗ ನಗರದಲ್ಲಿನ 22 ಕೊಳಚೆ ಪ್ರದೇಶಗಳಲ್ಲಿನ 2770 ಕುಟುಂಬಗಳಿಗೆ ಪರಿಚಯ ಪತ್ರಗಳನ್ನು ನೀಡಲಾಗಿದೆ. ಇನ್ನೂ 10 ಕೊಳಚೆ ಪ್ರದೇಶಗಳಲ್ಲಿ ಒಟ್ಟು 1338 ಕುಟುಂಬಗಳಿಗೆ ಪರಿಚಯ ಪತ್ರ ನೀಡಬೇಕಾಗಿರುತ್ತದೆ.

ಇ) ನಿರ್ಮಲ ಜ್ಯೋತಿ ಯೋಜನೆಯಡಿಯಲ್ಲಿ ಶಿವಮೊಗ್ಗ ನಗರದ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕಳೆದ 2 ವರ್ಷಗಳಲ್ಲಿ ಕಾಮಗಾರಿಗಳನ್ನು ಕೈಗೊಂಡಿಲ್ಲ. ಯೋಜನೆಯನ್ನು ಅನುಷ್ಠಾನಗೊಳಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.